ದಿನಾಂಕಃ 23-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಪಿ ಎಸ್ ಬಿ ವಕೀಲರಿಂದ

ಇದುವರೆಗೂ ನಾನು ಪ್ರತಿವಾದಿ 1 ರವರ ಮೇಲೆ ಈ ನ್ಯಾಯಾಲಯದಲ್ಲಿ 3 ದಾವೆಗಳನ್ನು ಹಾಕಿರುತ್ತೇನೆ. ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಒಂದು. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೂರು. ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೂರು. 1996 ರಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ತಂದೆಯವರು ದಾವೆಯನ್ನು ನಡೆಸುತ್ತಿದ್ದು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಬಸವರಾಜು ಬಿನ್ ಮಲ್ಲಾರಾಧ್ಯ ಎಂದರೆ ನಾನೆ. ದಾವಾ ಸಂಖ್ಯೆ 196/1996 ನೀವು 2 ನೇ ವಾದಿಯಾಗಿದ್ದು ಅದರಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿ. ನನಗೆ ಆ ದಾವೆಯ ಎಲ್ಲಾ ವಿಷಯಗಳು ನಿಮಗೆ ಗೊತ್ತು ಎಂದರೆ ಸಹಿ ಮಾಡಿರುತ್ತೇನೆ ಆದರೆ ಎಲ್ಲಾ ವಿಷಯಗಳು ಗೊತ್ತಿರುವುದಿಲ್ಲ. ಅದರ ವಕೀಲರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ನನ್ನ ತಂದೆಯವರಿಗೆ ಗೊತ್ತಿರುತ್ತದೆ. 1996 ರಲ್ಲಿ ಕೋಲಾರದ ಪುರುಷೋತ್ತಮ ಎಂಬ ವಕೀಲರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಅವರಿಗೆ ವಕಾಲತ್ ಅನ್ನು ಕೊಟ್ಟ ಆದರೆ ಮುನ್ಸಿಪಾಲಿಟಿಯಲ್ಲಿ ನಡೆಯುವ ಕೇಸಿಗೆ ಕೊಟ್ಟಿರುತ್ತೇನೆ. ದಾವಾ ಸಂಖ್ಯೆ 196/1996 ದಾವೆಯನ್ನು ಯಾರ ಯಾರ ಮೇಲೆ ಹಾಕಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಆ ದಾವೆಯು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಆ ದಾವೆಯು ವಜಾ ಆದ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಫ್ ಎ 451/2000 ಅಪೀಲು ಸಲ್ಲಿಸಿರುತ್ತೀರಿ ಎಂದರೆ ಗೊತ್ತಿರುವುದಿಲ್ಲ. ಅದರಲ್ಲಿ ಪ್ರಭಾಕರ್ ಎಂಬುವವರು ನಿಮ್ಮ ವಕೀಲರು ಎಂದರೆ ಗೊತ್ತಿರುವುದಿಲ್ಲ. ಅವರಿಗೆ ವಕಾಲತ್ ಅನ್ನು ಕೊಟ್ಟಿರುತ್ತೀರಾ ಎಂದರೆ ನನ್ನ ತಂದೆ ಮುಖಾಂತರ ಕೊಟ್ಟಿದ್ದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ಸರ್ವೆ ನಂ.1/1 ರ ಮೇಲೆ ದಾವೆ ಸಲ್ಲಿಸಿರುತ್ತೇವೆ. ಅದು ಯಾವ ಕ್ರಯ ಪತ್ರದ ಮೂಲಕ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ದಾವಾ ಸಂಖ್ಯೆ 196/1996 ದಾವಾ ಆಸ್ತಿಗೆ ಕೊಟ್ಟ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಆದರೆ ಈಗಿನ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ಸರ್ವೆ ನಂ.1/1 ರ ಪೂರ್ವಕ್ಕೆ ಸ್ಕೂಲ್ ಜವಾನ್ ನಂಜಪ್ಪನವರು, ಪಶ್ಚಿಮಕ್ಕೆ ಲಾಲಾ ಹಿಬ್ರಾಹಿಂ ಸಾಬ್ರ ದಕ್ಷಿಣಕ್ಕೆ ರಸ್ತೆ, ಕಾಲುವೆ, ಉತ್ತರಕ್ಕೆ ಸೊಣ್ಣಶೆಟ್ಟಿಹಳ್ಳಿ ಗ್ರಾಮ. ಆ ಸ್ವತ್ತಿನಲ್ಲಿ ನಿಮಗೆ ಯಾವುದೇ

ಹಕ್ಕು ಇಲ್ಲ ಎಂದು ಹೇಳಿ ದಾವಾ ಸಂಖ್ಯೆ 196/1996 ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಈ ದಾವೆಯಲ್ಲಿ ಪ್ರತಿವಾದಿ 1 ರವರು ಏನು ತಕರಾರು ಹಾಕಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ತಮ್ಮ ತಕರಾರಿನಲ್ಲಿ ದಾವಾ ಸಂಖ್ಯೆ 196/1996 ಮತ್ತು ಆರ್ ಎಫ್ ಎ ಬಗ್ಗೆ ಹೇಳಿದ್ದು ಅದರ ಬಗ್ಗೆ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ನಿಮಗೆ ಆ ವಿಷಯಗಳೆಲ್ಲ ಈಗ ಗೊತ್ತು ಎಂದರೆ ಸರಿ. ಪ್ರತಿವಾದಿ 1 ರವರ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 47/2016 ರಂತೆ ದಾವೆ ಹಾಕಿರುತ್ತೀರಿ ಎಂದರೆ ಸರಿ. ಅದೂ ಸರ್ವೆ ನಂ.1/1 ರ ಮೇಲೆ ಎಂದರೆ ಸರಿ . ಈ ದಾವೆಯಲ್ಲಿ ನಿಮ್ಮ ವಕೀಲರು ಹಾಕಿರುವ ಅರ್ಜಿಗಳು ನಿಮ್ಮ ಗಮನಕ್ಕೆ ಬಂದ ನಂತರ ಹಾಕಿರುವುದು ಎಂದರೆ ಸರಿ. ದಿ:13-04-1938 ರ ಕ್ರಯ ಪತ್ರ ಗೊತ್ತು ಎಂದರೆ ಸರಿ . ಅಸಲು ದಾವಾ ಸಂಖ್ಯೆ 196/996 ಮತ್ತು 47/2016 , 183/2018 ರ ದಾವೆಗಳಲ್ಲಿ ದಿ:13-04-1938 ರ ಕ್ರಯ ಪತ್ರಕ್ಕೆ ಸಂಬಂಧಪಟ್ಟ ಜಮೀನಿನ ಬಗ್ಗೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಡಿ ಡಿ ಎಲ್ ಆರ್ ಗೆ ನೀವು ಅಪೀಲನ್ನು ಹಾಕಿದ್ದೀರಿ ಎಂದರೆ ಸರಿ. ಅದು ಪ್ರತಿವಾದಿ 1 ರವರ ಮೇಲೆ ಹಾಕಿರುತ್ತೇನೆ. ಅದರಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿರುತ್ತದೆ. ಆ ಆದೇಶವನ್ನು ನಾವು ಒಪ್ಪಿಕೊಂಡಿರುತ್ತೇವೆ. ಅದರಲ್ಲಿ ಸರ್ವೆ ನಂ.1/1 ಕ್ಕೆ ಮತ್ತು 1/2 ಕ್ಕೆ ಚೆಕ್ಕುಬಂದಿ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅದರಲ್ಲಿ ಚೆಕ್ಕು ಬಂದಿ ತಪ್ಪಾಗಿರುತ್ತದೆ ಎಂದು ಹೇಳಿ ಮತ್ತು ವಿವಿಧ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವುದರಿಂದ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಹೇಳಿ ಆದೇಶ ಮಾಡಿರುತ್ತದೆ. ಡಿ ಡಿ ಎಲ್ ಆರ್ ರವರು ಚೆಕ್ಕುಬಂದಿ ತಪ್ಪಾಗಿದೆ ಎಂದು ಹೇಳಿರುವುದಿಲ್ಲ ನೀವು ಸುಳ್ಳುಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂ.1/2 ಆಸ್ತಿ ಸರ್ವೆ ನಂ.1/1 ರ ಪೂರ್ವಕ್ಕೆ ಬರುತ್ತದೆ ಎಂದರೆ ಸರಿಯಲ್ಲ ಪಶ್ಚಿಮಕ್ಕೆ ಬರುತ್ತದೆ. ಸರ್ವೆ ನಂ.1/2 ಸರ್ವೆ ನಂ,1/1 ರ ಪಶ್ಚಿಮಕ್ಕೆ ಬರುತ್ತದೆ ಎಂಬ ಬಗ್ಗೆ ದಾಖಲೆ ಇಲ್ಲ ಎಂದರೆ ಇದೆ ಎಂದು ನುಡಿಯುತ್ತಾರೆ. ಏನು ದಾಖಲೆ ಎಂದರೆ ಕ್ರಯ ಪತ್ರ ಮತ್ತು ನೊಂದಾಯಿತವಲ್ಲ ಕ್ರಯ ಪತ್ರ ಇದೆ ಎಂದು ನುಡಿಯುತ್ತಾರೆ. ನೀವು ಹೇಳಿರುವ ದಾಖಲೆಗಳಲ್ಲಿ ಆ ರೀತಿ ನಮೂದು ಇಲ್ಲ ಎಂದರೆ ಸರಿಯಲ್ಲ. ಡಿ ಡಿ ಎಲ್ ಆರ್ ಆದೇಶದಲ್ಲಿ ಸರ್ವೆ ನಂ.1/2 ಸರ್ವೆ 1/1 ರ ಪೂರ್ವಕ್ಕೆ ಇರುವುದು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆ ವಿಷಯ ಗೊತ್ತಿದ್ದರೂ ಕೂಡ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಬಸವರಾಧ್ಯ ಮತ್ತು ಬಸಪ್ಪರಾಧ್ಯ ಇಬಬರೂ ಅಣ್ಣ ತಮ್ಮಂದಿರು ಎಂದರೆ ಸರಿ. ಆವರಿಬ್ಬರ ಮಧ್ಯದಲ್ಲಿ ವಿಭಾಗ ಆಗಿರುತ್ತದೆ ಎಂದರೆ ಸರಿ. ಅದು ನೊಂದಾಯಿತ ಪತ್ರದ ಮೂಲಕ ಆಗಿದೆ ಎಂದರೆ ಸರಿ. ನಾವು ಬಸವರಾಧ್ಯ ರವರ ವಂಶಸ್ಥರು ಎಂದರೆ ಸರಿ. ಬಸಪ್ಪರಾಧ್ಯ ಹೆಂಡತಿ ನಂಜಮ್ಮ ಎಂದರೆ ಸರಿ. ಬಸಪ್ಪರಾಧ್ಯ ರವರಿಗೆ ಸರ್ವೆ ನಂ.1/1 ರೀಗ್ರಾಂಟ್ ಆಗಿದೆ ಎಂದರೆ ಸರಿ. ಆದ್ದರಿಂದ ಬಸವರಾಧ್ಯ ರವರ ವಂಶಸ್ಥರಾದ ಮಲ್ಲಾರಾಧ್ಯ, ಬಸಾವಾಜು ಮತ್ತು ರೇಣುಕಾರಾಧ್ಯ ಮತ್ತು ಮಹೇಶ್ ಕುಮಾರ್ ಹಾಗೂ ಬಸವರಾಧ್ಯ ರವರ ಕುಟುಬಂಸ್ಥರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ, ನಮಗೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಆ್ರ್ ಎಫ್ ಎ ಎ 451/2000 ಆದೇಶದ ವಿರುದ್ದ ಅಪೀಲು ಹೋಗಿರುವುದಿಲ್ಲ ಎಂದರೆ ಅದು ನಡೆದಿರುವುದೇ ನನಗೆ ಗೊತ್ತಿಲ್ಲ.

ಆರ್ ಎಫ ಎ 451/2000 ರಲ್ಲಿ ಆಗಿರುವ ಆದೇಶವನ್ನು ನೀವು ಒಪ್ಪಿಕೊಳ್ಳುತ್ತೀರಾ ಎಂದರೆ ಸಾಕ್ಷಿಯು ನಾನು ಆದೇಶಕ್ಕೆ ತಲೆ ಬಾಗುತ್ತೇನೆ ಎಂದು ನುಡಿಯುತ್ತಾರೆ. ಎ ಸಿ ನ್ಯಾಯಾಲಯದಲ್ಲಿ ಬಸಪ್ಪರಾಧ್ಯ ರವರ ಹೆಂಡತಿ ನಂಜಮ್ಮ ಹಾಕಿದ ಅರ್ಜಿಗೆ ಸರ್ವೆ ನಂ.1/1 ಖಾತೆ ಆಗಿದೆ ಎಂದರೆ ಖಾತೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. 2011 ನೇ ಇಸ್ವಿಯಲ್ಲಿ ಸರ್ವೆ ನಂ.1/1 ಯಾರ ಹೆಸರಿಗೆ ಇತ್ತು ಎಂದು ಗೊತ್ತಾ ಎಂದರೆ ಸಾಕ್ಷಿಯು ತಕರಾರಿನಲ್ಲಿ ಇದ್ದು ಯಾರ ಹೆಸರಿನಲ್ಲಿಯೂ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಕಿರುವ ಅರ್ಜಿಗಳಲ್ಲಿ ಒಂದು ಮಾತ್ರ ಇರುತ್ತದೆ ಡಬ್ಲ್ಯೂಪಿ-40090/2017 ಇರುತ್ತದೆ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.